# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ.ಸ.ಕಾ.ನಿ.ಅ./ಕೋ.ಉ.ವಿ/ಪಿ.ಆರ್/06 /2020-21

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ,
ಕೋರಮಂಗಲ ಉಪವಿಭಾಗ,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು, ದಿನಾಂಕ: 18-12-2020

## ಸಭೆ ಸೂಚನಾ ಪತ್ರ

ಮಾನ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ.ಬಿ12(5)/ಪಿಆರ್/35/2020-21, ದಿನಾಂಕ:21-09-2020ರ ರೀತ್ಯಾ ವಾರ್ಡ್ ಸಂಖ್ಯೆ.148 (ಈಜೀಪುರ) ವ್ಯಾಪ್ತಿಯ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ **ದಿನಾಂಕ:22.12.2020 ರಂದು ಬೆಳಗ್ಗೆ 10.30 ಕ್ಕೆ ಸ್ಥಳ: ಕಾಮಗಾರಿ ವಾರ್ಡ್-148 ರ ಕಛೇರಿ, Hot mix plant, 80 feet road, ಈಜೀಪುರ, ಬೆಂಗಳೂರು** ಇಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಕಮಿಟಿ ಸಭೆಯನ್ನು ನಡೆಸಲು ನಿರ್ಧರಿಸಲಾಗಿದ್ದು, ಸದರಿ ದಿನಾಂಕದಂದು ತಾವುಗಳು ತಪ್ಪದೇ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ ಹಾಗೂ ಹಿಂದಿನ ಸಭೆಯ ನಡವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದ್ದು, ತಮ್ಮ ವ್ಯಾಪ್ತಿಗೆ ಬರುವಂತಹ ವಿಷಯಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಸಭೆಗೆ ಹಾಜರಾಗಲು ಕೋರಿದೆ. ತಮ್ಮ ಗೈರುಹಾಜರಿಯ ಬಗ್ಗೆ ಮಾನ್ಯ ಆಯುಕ್ತರು ರವರ ಗಮನಕ್ಕೆ ತರಲಾಗುವುದು.

18/12/2020

ಕಾರ್ಯದರ್ಶಿ, ವಾರ್ಡ್ ಕಮಿಟಿ & ಸಹಾಯಕ ಅಭಿಯಂತರರು
ವಾರ್ಡ್ ನಂ.148 ಈಜೀಪುರ

ಪ್ರತಿಯನ್ನು:-

1. ಜಂಟಿ ಆಯುಕ್ತರು, ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು, ಬಿ.ಟಿ.ಎಂ. ಲೇಔಟ್, ಬಿ.ಬಿ.ಎಂ.ಪಿ
4. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ವಿಭಾಗ ರವರಿಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ, ಬಿ.ಬಿ.ಎಂ.ಪಿ. ಬೆಂಗಳೂರು.
6. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ಬಿ.ಟಿ.ಎಂ. ಲೇಔಟ್ ವಿಭಾಗ ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಹಾಗೂಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆದಾರರೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
8. ಸಹ ಕಂದಾಯ ಅಧಿಕಾರಿಗಳು, ಕಂದಾಯ ಇಲಾಖೆ, ಕೋರಮಂಗಲ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಬೆಂಗಳೂರು.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ, ಬಿ.ಬಿ.ಎಂ.ಪಿ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಬೆಂಗಳೂರು
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ, ದಕ್ಷಿಣ ವಲಯ , ಬೆಂಗಳೂರು
13. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ದಕ್ಷಿಣ ವಲಯ, ಬೆಂಗಳೂರು.
14. ಠಾಣಾಧಿಕಾರಿಗಳು, ವಿವೇಕಾನಗರ ಪೋಲಿಸ್ ಠಾಣೆ ರವರಿಗೆ ಸಲ್ಲಿಸಿ, ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
15. ಠಾಣಾಧಿಕಾರಿಗಳು, ಕೋರಮಂಗಲ ಪೋಲಿಸ್ ಠಾಣೆ ರವರಿಗೆ ಸಲ್ಲಿಸಿ, ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
16. ಕಛೇರಿ ಕಡತಕ್ಕೆ.

Scanned by CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ-ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ-148 ದಿನಾಂಕ:22-12-2020 ರಂದು ಡಿಸೆಂಬರ್-2020 ರ ವಾರ್ಡ್ ಸಮಿತಿಯ ಮಾಸಿಕ ಸಭೆಯ ನಡವಳಿಗಳು**

ಡಾ|| ಅಶೋಕ್ ಡಿ.ಆರ್. ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ಕಾಮಗಾರಿ ವಾರ್ಡ್-148 ರ ಕಛೇರಿ, **Hot mix plant, 80 feet road,** ಈಜೀಪುರದಲ್ಲಿ ದಿನಾಂಕ:22.12.2020 ರಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

ಹಾಜರಿದ್ದ ಸದಸ್ಯರು:-

1. ಶ್ರೀ ಅನಿಲ್ ಕುಮಾರ್, ಅಶ್ವಿನಿ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ
2. ಶ್ರೀ ಕೆ.ಆರ್.ಕೆ ರೆಡ್ಡಿ
3. ಶ್ರೀ ಎಸ್. ಸುರೇಶ್ ಕುಮಾರ್

ಹಾಜರಿದ್ದ ಅಧಿಕಾರಿಗಳು:-

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-148 ಈಜೀಪುರ
2. ಶ್ರೀ ಮುತ್ತುರಾಜ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-148

* * * * *

ಡಾ|| ಅಶೋಕ್ ಡಿ.ಆರ್. ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ಹಿಂದಿನ ಸಭೆಯ ನಡವಳಿಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆಗಳ ವತಿಯಿಂದ ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಡಾ|| ಅಶೋಕ್ ಡಿ.ಆರ್. ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ರವರು ಮಾತನಾಡಿ ರಾತ್ರಿ ವೇಳೆಯಲ್ಲಿ ನಿರಾಶ್ರಿತರು ಬಸ್ ನಿಲ್ದಾಣ ತಂಗುವುದು ಮತ್ತು ಟ್ರಾಫಿಕ್ ಸಿಗ್ನಲ್‌ನಲ್ಲಿ ಮಕ್ಕಳು ಭಿಕ್ಷೆ ಬೇಡುವುದನ್ನು ತಪ್ಪಿಸುವುದು. ಇಂಥಹವರು ಹೆಚ್ಚಾಗಿರುವಂತಹ ಸ್ಥಳಗಳು ಮತ್ತು ಟ್ರಾಫಿಕ್ ಜಂಕ್ಷನ್‌ಗಳಲ್ಲಿ ಸರ್ವೆ ಕೈಗೊಂಡು ನಿರಾಶ್ರಿತರನ್ನು ಮತ್ತು ಭಿಕ್ಷೆ ಬೇಡುವವರನ್ನು ಗುರುತಿಸಲು ಕಂದಾಯ ನಿರೀಕ್ಷಕರು, ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಿದರು.

ಡಾ|| ಅಶೋಕ್ ಡಿ.ಆರ್. ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿ ರವರು ಮಾತನಾಡಿ, Manual Scavengers ಮಾನವರನ್ನು ಉಪಯೋಗಿಸಿ ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ದೃಷ್ಟಿಯಿಂದ ವಾರ್ಡ್ ವ್ಯಾಪ್ತಿಯಲ್ಲಿ ಮಲ ಹೊರುವುದು ಎಲ್ಲಾದರೂ ಗಮನಕ್ಕೆ ಬಂದರೆ ಸಭೆಯ ಗಮನಕ್ಕೆ ತರಲು ಸೂಚಿಸಿದರು.

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಮನೆ ಮನೆಯಿಂದ ಕಸವನ್ನು ತಪ್ಪದೇ ಸಂಗ್ರಹಿಸಲು ಹಾಗೂ ಬುಧವಾರದಂದು ದಿನದಂದು Thermacoal ಮತ್ತು ಹಳೆ ಹಾಸಿಗೆ ಮತ್ತು ಇತರೆ ಒಣ ಕಸವನ್ನು ಸಂಗ್ರಹಿಸುವಂತೆ ಸಭೆಗೆ ತಿಳಿಸಿದರು. ಇದಕ್ಕೆ ಡಾ|| ಅಶೋಕ್ ಡಿ.ಆರ್. ನೋಡಲ್ ಅಧಿಕಾರಿ ರವರು ಕಿರಿಯ ಆರೋಗ್ಯಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.



Scanned by CamScanner

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಒಳಚರಂಡಿ ಕಾಮಗಾರಿಯನ್ನು ಕೈಗೊಂಡ ಸಂದರ್ಭಗಳಲ್ಲಿ ಮನೆಯ ಸಂಪರ್ಕಗಳನ್ನು ಸ್ಥಗಿತಗೊಳಿಸಲಾಗಿರುತ್ತದೆ. ಒಳಚರಂಡಿ ಕಾಮಗಾರಿ ಪೂರ್ಣಗೊಂಡ ನಂತರ ಇಲಾಖೆಯವರೆ ಮರು ಸಂಪರ್ಕವನ್ನು ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಗೆ ಸೂಚಿಸುವಂತೆ ನೋಡಲ್ ಅಧಿಕಾರಿರವರಿಗೆ ಕೋರಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

22/12/2020

(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-148 ಈಜೀಪುರ

(ಡಾ॥ [illegible] .ಆರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-148 ಈಜೀಪುರ

Scanned by CamScanner



Scanned by CamScanner



Scanned by CamScanner